ಸಂಬಂಧದ ಸಾಕ್ಷಾತ್ಕಾರವಿದು. ಬದುಕಿನಲ್ಲಿ ಕಂಡುಕೊಳ್ಳುವ ಸಾಧ್ಯತೆಯನ್ನು ನಾನು ಹೀಗೆ ನೋಡಬಯಸುವೆ. ರಾಮ–ಕೃಷ್ಣರು ಅವತಾರ ಪುರುಷರು ಎಂದು ಹೇಳಲಾಗಿದೆ. ಅವತರಣ ಎಂದರೆ ಕೆಳಗಿಳಿದು ಬರುವುದು. ದೇವರು ಮನುಷ್ಯರ ಬದುಕಿಗೆ ಇಳಿದು ಬರುವುದು. ಮನುಷ್ಯರಂತೆಯೇ ವರ್ತಿಸುವುದು. ಆದರೂ ನಾವು ಎಲ್ಲರಂತಲ್ಲ ಎಂದು ಕೆಲವು ಸೂಚನೆಗಳನ್ನು ಕೊಡುವುದು. ದೇವರಿಗೆ ಮರೆವು ಉಂಟೆ? ಇರಲಾರದು. ತಾನು ದೇವರೆನ್ನುವುದು ಮರೆಯಲಾರದು. ಮರೆಯದಿದ್ದರೆ, ಅವತಾರ ಪುರುಷರ ವರ್ತನೆಗಳೆಲ್ಲವೂ ದೊಡ್ಡ ಅಭಿನಯವಾಯಿತಲ್ಲ! ಅಭಿನಯವೆಂದೇ ಆಗಲಿ. ದೇವರಿಗೆ ಅಭಿನಯವು ಹೀನಾಯವಲ್ಲ. ಏಕೆಂದರೆ ಅಭಿನಯ ಮತ್ತು ನಿಜದ ಇರುವಿಕೆ ಇವೆರಡೂ ದೇವರಿಗೆ ಒಂದೇ. ಬೇರೆ ಬೇರೆಯಲ್ಲ. ಮನುಷ್ಯರಲ್ಲಿ ನಿಜ ಬೇರೆ, ಅಭಿನಯ ಬೇರೆ. ಅಲ್ಲದೆ ಎಂಥ ನಿಜದಲ್ಲೂ ಅಭಿನಯದ ಒಂದು ಅಂಶ ಇರುತ್ತದೆ – ಮನುಷ್ಯರಲ್ಲಿ 'ಪ್ರಜ್ಞಾಪೂರ್ವಕವಾದ ಬದುಕಿನ ಇಬ್ಬಗೆ ಇದು. ಇಂಥ ಮನುಷ್ಯ ಜೀವಗಳು ಅಭಿನಯವೂ ನಿಜವೇ ಆಗಿರುವ ಅವಸ್ಥೆಯೊಂದನ್ನು ನೋಡಬೇಕು! ನೋಡಿದರೆ, ಜೀವಂತಿಕೆ ಎನ್ನುವುದು ಹೇಗೆ ಸರ್ವವ್ಯಾಪಿಯಾಗಿದೆ, ನಿಜ ಮತ್ತು ಅಭಿನಯ ಎಂಬ ವಿಂಗಡಣೆಯನ್ನು ಅದು ಹೇಗೆ ಮೀರಿ ನಿಂತಿದೆ ಎಂಬುದು ಅರಿವಾಗುವುದು. ಬದುಕು ಅಖಂಡವೆನ್ನುವುದೇ ಬದುಕಿನಲ್ಲಿ ಆಗಬೇಕಾದ ಸಾಕ್ಷಾತ್ಕಾರ.

◆ **ಈ ನೆಲದ ಸಾತ್ವಿಕ ಗುಣವೇ ಮೈವೆತ್ತಂತಿರುವ ಪುತ್ತೂರು ಅಜ್ಜನವರ ಒಡನಾಟದಲ್ಲಿದ್ದವರು ನೀವು. ಅದರ ಬಗ್ಗೆ ಸ್ವಲ್ಪ ಹೇಳಿ.**

ಏನು ಹೇಳಲಿ! ನಾನು ಒಂದು ಹೊತ್ತಗೆಯನ್ನೇ ಆ ಬಗ್ಗೆ ಬರೆದಿರುವೆ. ಒಂದು ಘಟನೆಯನ್ನು ಹೇಳುವೆ. ಅವರನ್ನೊಮ್ಮೆ ಹೀಗೆ ಕೇಳಲಾಯಿತು. 'ನೀವು ಎಲ್ಲರ ಹಾಗೆ ಇಲ್ಲ. ವಿಲಕ್ಷಣವಾಗಿ ಇದ್ದೀರಿ. ನಿಮಗೆ ನಿಜಕ್ಕೂ ಏನು ಅನುಭವವಾಗಿದೆ?'

ಈ ಪ್ರಶ್ನೆಗೆ ಅಜ್ಜ ಕೊಟ್ಟ ಉತ್ತರವಿದು: 'ನೀವು ಸಿ.ಸಿ. ಕ್ಯಾಮೆರಾ ಎಂದು ಹೇಳುತ್ತೀರಲ್ಲ. ಅಂಥದೊಂದು ಕ್ಯಾಮೆರಾ ಪ್ರತಿಯೊಬ್ಬರ ಒಳಗೂ ಇದೆ. ನಮ್ಮೊಳಗಿರುವ ಕ್ಯಾಮೆರಾ ಓಪನ್ ಆಗಿದೆ; ಅದಕ್ಕೆ ಕಾಣದೇ ಇದ್ದುದಿಲ್ಲ. ಅಷ್ಟೇ.'

ಮತ್ತೆ ಕೇಳಲಾಯಿತು. 'ಏನೆಲ್ಲ ಕಾಣಿಸುತ್ತದೆ ಮಹನೀಯರೇ?'

ಅವರ ಉತ್ತರ ಹೀಗೆ: 'ಎಲ್ಲವೂ. ಹಿಂದೆ ನಡೆದುದು, ಈಗ ನಡೆಯುತ್ತಿರುವುದು. ಮುಂದೆ ನಡೆಯಲಿರುವುದು, ಎಲ್ಲವೂ. ಹೆಚ್ಚೇಕೆ? ಈ ಬ್ರಹ್ಮಾಂಡದ ಸೃಷ್ಟಿ ಆಯಿತಲ್ಲ, ಆ ಸೃಷ್ಟಿ ಪ್ರಕ್ರಿಯೆ ನಮಗೆ ಕಾಣಿಸುತ್ತದೆ!'

ಮತ್ತೆ ಕೇಳಲಾಯಿತು: 'ಹಾಗಾದರೆ ನೀವು?'

ಅವರ ಉತ್ತರ: 'ಹೌದು. ಸೃಷ್ಟಿ ಪೂರ್ವದಲ್ಲಿಯೇ ಇದ್ದವರು ನಾವು' ಇದು ಪುತ್ತೂರು ಅಜ್ಜ! ಭಗವದ್ಗೀತೆಯಲ್ಲಿ ಈ ಮೇಲಿನ ಮಾತುಗಳಿಗೆ ಸದೃಶವಾದ ಮಾತುಗಳಿವೆ! ಹಾಗಾದರೆ ಇದು ಎಲ್ಲಿಗೆ ಒಯ್ಯುತ್ತದೆ ನೀವೇ ಯೋಚಿಸಿ. ಇದನ್ನೆಲ್ಲಾ ನಾನು ಹೇಳುತ್ತ ಹೋದರೆ ನಾನೊಬ್ಬ ಮೂಢನಂಬಿಕೆಗಳನ್ನು ಹರಡುವವನು ಎಂದು ದೂರಲಾಗುತ್ತದೆ! ಆಗಲಿ. ಆ ಹೆಸರನ್ನೂ ಕೇಳುವಂತಾಗಲಿ. ಚಿಂತೆ ಇಲ್ಲ.

◆ **ಸತ್ಯಕಾಮರು ಮತ್ತು ಗೋಪಾಲಕೃಷ್ಣ ಅಡಿಗರ ಬಗ್ಗೆ?**

ಈ ಇಬ್ಬರು ಮಹನೀಯರಿಗೂ ಒಂದು ಸಮಾನಧರ್ಮ ಇತ್ತು. ಅದೆಂದರೆ ಭಾಷೆಯನ್ನು ತನ್ನದನ್ನಾಗಿ ಮಾಡಿಕೊಳ್ಳುವುದು. ಭಾಷೆಯನ್ನು ಮಣಿಸುವುದು, ಪಳಗಿಸುವುದು. ಭಾಷೆಯನ್ನು ಉತ್ಕಟವಾಗಿ ಪ್ರೀತಿಸುವುದು. ಮನಸ್ಸಿನಲ್ಲಿ ಹಾಯುವ ಆಲೋಚನಾಪೂರ್ವದ ಅಸ್ಪಷ್ಟ ಸಂವೇದನೆಗಳೂ ಭಾಷೆಯಲ್ಲಿ ಮೈತಾಳಬೇಕೆಂದು ತಪಿಸುವುದು! ಸತ್ಯಕಾಮರ ಈ ಒಂದು ವಾಕ್ಯವನ್ನು ಗಮನಿಸಿ. 'ಚಕ್ರವೆಂದರೆ ಚಲನೆಗೆ ಕೊಟ್ಟ ಆಕಾರ.' ಈ ವಾಕ್ಯವೇ ನಿಮ್ಮ ಮನಸ್ಸಿನ ಚಲನೆಯನ್ನು ಅಂತರ್ಮುಖಗೊಳಿಸುತ್ತದೆ. ಹಾಗೆಯೇ ಅಡಿಗರ ಈ ಸಾಲು ನೋಡಿ. 'ಹೃದಯ ಮಧ್ಯವೆ ರೂಪು ತಳೆವ ತ್ರಿಜ್ಯಗಳ ಸಂಖ್ಯೆಕ್ಕೆ ಗುರಿ ಮುರಿ ತಣಿವು ತರುವ ಪರಿಧಿಯ ಸಾಮತೇಜಸ್ಸೇ ನಮಸ್ಕಾರ'. ಈ ಸಾಲಿಗೆ ಅನಂತಮೂರ್ತಿಯವರ ಹೃದಯಂಗಮವಾದ ವಿವರಣೆ ಹೀಗಿದೆ: "ಮೊದಲು ದೀರ್ಘಗೊಳ್ಳಬಲ್ಲ